KACD420007122024

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಹೊಳಲ್ಕೆರೆ.**

ಸಿ.ಸಿ. ನಂಃ **450/2024**

ಫಿರ್ಯಾದಿದಾರರುಃ ಸರ್ಕಾರದ ಪರವಾಗಿ –ಚಿಕ್ಕಜಾಜೂರು ಪೋಲೀಸ್ ಠಾಣೆ

- ವಿರುದ್ಧ -

ಆರೋಪಿ ಃ

1. ನಂಜುಂಡಪ್ಪ ಬಿನ್ ಲೇಟ್ ನಾಗೇಂದ್ರಪ್ಪ ,
ವಯಸ್ಸುಃ 51 ವರ್ಷ, ವೃತಿಃ ಜಿರಾಯ್ತಿ ಕೆಲಸ , ,
ಕೆಎ–17–ಹೆಚ್.ಡಿ.0206 ರ ಎಂ/ಸಿ ರೈಡರ್,
ವಾಸಃ ನಾಗೇನಹಳ್ಳಿ ಗ್ರಾಮ, ಚನ್ನಗಿರಿ ತಾಲ್ಲೂಕು,
ದಾವಣಗೆರೆ ಜಿಲ್ಲೆ .

2. ತಿಪ್ಪೇಶ್ ನಾಯ್ಕ ಬಿನ್ ಕುಬ್ಯಾನಾಯ್ಕ,
ವಯಸ್ಸುಃ 35 ವರ್ಷ, ವೃತಿಃ ಚಾಲಕ
ಕೆಎ–16–ಎ–2878 ರ ಲಾರಿಯ ಚಾಲಕ,
ವಾಸಃ ಡಿ.ಮದಕರಿಪುರ ಗ್ರಾಮ ,
ಚಿತ್ರದುರ್ಗ ತಾಲ್ಲೂಕು ಮತ್ತು ಜಿಲ್ಲೆ .

(1 **ನೇ ಆರೋಪಿಯು ಮೃತಪಟ್ಟಿರುತ್ತಾರೆ**. )

**:: ಆ ಪಾ ದ ನೆ ::**

ದಿಃ 04–11–2023 ರಂದು ಸಂಜೆ ಸುಮಾರು 5–00 ರ ಸಮಯದಲ್ಲಿ 2 ನೇ ಆರೋಪಿತನಾದ ನೀನು ಸಿರಿಗೆರೆ ಕಡೆಯಿಂದ ಸಾಸಲು ಹಳ್ಳ ಗ್ರಾಮದ ಕಡೆಗೆ ಹೋಗುವ ರಸ್ತೆಯಲ್ಲಿ ಕೆಎ–16–ಎ–2878 ರ ಟಿಪ್ಪರ್ ಲಾರಿಯನ್ನು ಯಾವುದೇ ಮುನ್ಸೂಚನೆ ನೀಡದೆ , ಪಾರ್ಕಿಂಗ್ ಲೈಟ್ ಹಾಕದೆ, ರಸ್ತೆಯ ಸುಗಮ ಸಂಚಾರಕ್ಕೆ ಅಡ್ಡಿಯಾಗುವಂತೆ ರಸ್ತೆಯಲ್ಲಿ ಹೆಚ್ಚು ಹೊತ್ತು ನಿಯಮಬಾಹಿರವಾಗಿ ನಿಲುಗಡೆ ಮಾಡಿರುತ್ತೀರಿ. ಈ ಮೂಲಕ 2 ನೇ ಆರೋಪಿತನಾದ ನೀನು ಈ ನ್ಯಾಯಾಲಯದ ಸಂಜ್ಞೆದೊಳಗೆ ಭಾಂ. ದಂ. ಸಂ.ಕಲಂ 283 ಮತ್ತು ಭಾರತೀಯ ಮೋಟಾರ್ ವಾಹನ ಕಾಯಿದೆ ಕಲಂ 117 ಸಹವಾಚಕ ಕಲಂ 177 ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧ ಎಸಗಿರುತ್ತೀರೆಂದು ಆಪಾದಿಸಲಾಗಿರುತ್ತದೆ.

KACD420007122024

ಪ್ರಶ್ನೆ–1. ನಿಮಗೆ ಮೇಲಿನ ಅಪಾದನೆಯ ಸಾರಾಂಶ ತಿಳಿಯಿತೇ ?

ಉತ್ತರಃ –

ಪ್ರಶ್ನೆ–2. ಮೇಲಿನ ಆಪಾದನೆಯನ್ನು ಒಪ್ಪುವಿರಾ ? ಪ್ರತಿರಕ್ಷೆ ಇದೆಯಾ ?

ಉತ್ತರಃ

(ಮೇಲಿನ ಆಪಾದನೆಯನ್ನು ಆರೋಪಿಗೆ ತೆರೆದ ನ್ಯಾಯಾಲಯದಲ್ಲಿ ಕನ್ನಡದಲ್ಲಿ ಓದಿ ಹೇಳಿ, ನಂತರ ಅವರು ನೀಡಿದ ಉತ್ತರವನ್ನು ತೆರೆದ ನ್ಯಾಯಾಲಯದಲ್ಲಿ ಬರೆದುಕೊಳ್ಳಲಾಯಿತು.

ದಿಃ 15-07-2024

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ ಎಂ ಎಫ್ ಸಿ ಹೊಳಲ್ಕೆರೆ